# ನಿನ್ನ ಭಕುತಿಯನು ಬೀರೊ ದೇವ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 113.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 261.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 339.
4. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 385.
5. **Note:** Lyrics mentioned here are as per Ref. 1. The wordings in Ref. 2 are same as in Ref. 1. The lyrics in Ref. 3 and Ref. 4 are same as in Ref. 1 with few differences (important differences are given in yellow highlights), which are not considered here.
6. **Note:** Singer has followed the lyrics.
7. **Note:** Ankita is different in these books. We have considered Ref.1 as standard and taken that Ankita for listing.

ರಾಗ: ಶಂಕರಾಭರಣ ತಾಳ: ತ್ರಿಪುಟ

ನಿನ್ನ ಭಕುತಿಯನು ಬೀರೋ ದೇವ
ಎನ್ನ ಮನ್ನಿಸಿ ಸಲಹುವರಾರೋ || ಪ ||

ಸನ್ನುತ ಸನ್ಮಾರ್ಗ ತೋರೋ ಆ- (ಪ್ರ-ಸನ್ನ)
ಪನ್ನ ರಕ್ಷಕ ಬೇಗ ಬಾರೋ || ಅಪ ||

ಪನ್ನಗಶಯನ ಲಕ್ಷ್ಮೀಶ, ವೇದ
ಸನ್ನುತ ಪಾದ ಸರ್ವೇಶ
ಇನ್ನು ಬಿಡಿಸೋ (ಭವ ಪಾಶ, ಪ್ರ- (ಮೋಹ ಪಾಶ, ಆಪನ್ನ)
ಸನ್ನ) (ರಕ್ಷಿಸೊ) ಶ್ರೀನಿವಾಸ || 1 || (ರಕ್ಷಕ)

ನಾರದ ಗಾನವಿಲೋಲ, ಸ್ವಾಮಿ
ಭೂರಿ ಭಕ್ತರ ಪರಿಪಾಲ
ಶ್ರೀರಮಣ ಕರುಣಾಲವಾಲ, ದೇವ
ನೀರದ ಶ್ಯಾಮ ಗೋಪಾಲ || 2 ||

ಕರಿರಾಜ ವರದ ಅಪ್ರಮೇಯ ಎನ್ನ
ಅರಿತು ಪಾಲಿಸೊ ಯೋಗಿ ಧ್ಯೇಯ
ಸುರಮುನಿ ಹೃದಯ ನಿಕಾಯ ನಮ್ಮ
ಪುರಂದರ ವಿಠಲರಾಯ || 3 || (ಗುರು ಪುರಂದರವಿಠ್ಠಲರೇಯ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪನ್ನಂಗ** – ಪನ್ನಗ, ಶೇಷ.

**ವೇದ ಸನ್ನುತ ಪಾದ** – 'ಸರ್ವೇ ವೇದಾ ಯತ್ಪದಮಾಮನಂತಿ' ಎನ್ನುವ ಉಪನಿಷದ್ವಾಕ್ಯದ ಛಾಯೆ.

**ಪ್ರಸನ್ನ** = ಮನಸ್ಸನ್ನು ಸಮಾಧಾನ ಪಡಿಸುವವನು

**ಆಪನ್ನ ರಕ್ಷಕ** = ಸಂಕಟದಲ್ಲಿ ಇದ್ದವರನ್ನು ಸಂರಕ್ಷಿಸುವವನು

**ಭೂರಿ** = ಬಹಳ

**ಕರುಣಾಲವಾಲ** – ಗಿಡಕ್ಕೆ ನೀರಿನ ಪಾತಿಯಿದ್ದಂತೆ, ಜೀವನಿಗೆ ಪರಮಾತ್ಮ ದಯೆ.

**ನೀರದ ಶ್ಯಾಮ** – ಮೋಡ(ನೀರ–ದ)ದಂತೆ ನೀಲಿಗಪ್ಪಿನ ಮೈಯುಳ್ಳವನು.

**ಯೋಗಿ ಧ್ಯೇಯ** – ಯೋಗಿಗಳಿಗೆ ಆದರ್ಶನಾಗಿರುವವನು, ಯೋಗಿಗಳ ಧ್ಯಾನಕ್ಕೆ ವಿಷಯ ನಾದ ವನು.

**ಸುರಮುನಿ ಹೃದಯ ನಿಕಾಯ** – ದೇವತೆಗಳ ಮತ್ತು ಮುನಿಜನರ ಹೃದಯ ನಿವಾಸಿ

**ಅಪ್ರಮೇಯ** = ಅಸಾಮಾನ್ಯ, ಅಳೆಯಲು ಬಾರದ

**Classification:** Keerthane
**Ankita:** purandara vittala
**Location:** NA

**Category:** Pooja Tatva, Bhakti

**Sub-Category:** bhakti, deva, dari, Vishnu, Narayana, bhava, srinivasa, narada, karuna, Gopala, gaja, aprameya, sura, muni, hrudaya,

**Pravachana:** NA

**Explanation:** NA